# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 464 (401)

ಸದಸ್ಯರ ಹೆಸರು : ಡಾ: ತಳವಾರ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 12-12-2024

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಲಬುರಗಿ ನಗರದಲ್ಲಿ ಪ್ರಾರಂಭಿಸಿದ ರಾಜ್ಯ ಮಾಹಿತಿ ಆಯೋಗದ ಪೀಠಕ್ಕೆ ಒದಗಿಸಿದ ಮೂಲಭೂತ ಸೌಕರ್ಯಗಳು ಮತ್ತು ಸಿಬ್ಬಂದಿ ವಿವರ ನೀಡುವುದು;</td><td>ಕಲಬುರಗಿ ನಗರದ ಮಹಲ್-ಎ-ಶಾಹಿ ಗೆಸ್ಟ್ ಹೌಸ್ ಕಟ್ಟಡದಲ್ಲಿ ಕಲಬುರಗಿ ಪೀಠ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಪೀಠದ ದೈನಂದಿನ ಕಾರ್ಯಚಟುವಟಿಕೆಗಳಿಗೆ ಈ ಕೆಳಕಂಡ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.
<table>
<tr><th>ಕ್ರ.ಸಂ.</th><th>ಒದಗಿಸಲಾದ ಮೂಲಭೂತ ಸೌಲಭ್ಯಗಳ ವಿವರ</th><th>ಸಂಖ್ಯೆ</th></tr>
<tr><td>1</td><td>ಕಟ್ಟಡ ಹಾಗೂ ಅಗತ್ಯ ಪೀಠೋಪಕರಣ</td><td rowspan="3">ಲೋಕೋಪಯೋಗಿ ಇಲಾಖೆ, ಕಲಬುರಗಿ ವತಿಯಿಂದ ಕ್ರಮ ಸಂಖ್ಯೆ: 01 ರಿಂದ 03ರ ವರೆಗಿನ ಸೌಲಭ್ಯಗಳನ್ನು ಒದಗಿಸಲಾಗಿದೆ.</td></tr>
<tr><td>2</td><td>ವಿದ್ಯುತ್ ಸಂಪರ್ಕ</td></tr>
<tr><td>3</td><td>ಕುಡಿಯುವ ನೀರು</td></tr>
<tr><td>4</td><td>ಗಣಕಯಂತ್ರ</td><td>06</td></tr>
<tr><td>5</td><td>ಪ್ರಿಂಟರ್</td><td>02</td></tr>
<tr><td>6</td><td>Photocopier ಯಂತ್ರ</td><td>01</td></tr>
<tr><td>7</td><td>ದೂರವಾಣಿ ಸಂಪರ್ಕ</td><td>01</td></tr>
<tr><td>8</td><td>KSWAN-ಇಂಟರ್ ನೆಟ್ ಸಂಪರ್ಕ</td><td>ಒದಗಿಸಲಾಗಿದೆ.</td></tr>
<tr><td>9</td><td>Webex ಸೇವೆ</td><td>ಕಲಬುರಗಿ ಪೀಠಕ್ಕೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ,2005 ಸೆಕ್ಷನ್ 19(3)ರಡಿ ಮೇಲ್ಮನವಿ ಹಾಗೂ ಸೆಕ್ಷನ್ 18(1)ರಡಿ ದೂರುಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯನ್ನು ಆನ್ ಲೈನ್ ಮುಖೇನ ಸಹ</td></tr>
</table>
</td></tr>
</table>

| | | |
|---|---|---|
| | | <table><tr><td></td><td></td><td>ಕೈಗೊಳ್ಳಲು Webex ಸೇವೆಯನ್ನು ಕಲ್ಪಿಸಲಾಗಿದೆ.</td></tr></table><br>ಕಲಬುರಗಿ ಪೀಠದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.<br><br>ಹೊರಗುತ್ತಿಗೆ ಆಧಾರದ ಸಿಬ್ಬಂದಿಗಳ ಹೊರತಾಗಿ ಕಲಬುರಗಿ ಪೀಠಕ್ಕೆ ಸಂಬಂಧಿಸಿದ ಪ್ರಕರಣಗಳ ಆನ್‌ಲೈನ್ ಮೂಲಕ ವಿಚಾರಣೆಗೆ ಸಂಬಂಧಿಸಿದಂತೆ ತೀರ್ಪುಗಳನ್ನು ಸಿದ್ಧಪಡಿಸಲು ಒಬ್ಬರು ದತ್ತ ನಮೂದಕರನ್ನು ಕರ್ನಾಟಕ ಮಾಹಿತಿ ಆಯೋಗದ ಬೆಂಗಳೂರು ಕಛೇರಿಯಲ್ಲಿ ಒದಗಿಸಲಾಗಿದೆ. |
| (ಆ) | ಈ ಪೀಠವು ಕಲಬುರಗಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯಕೈಗೊಳ್ಳದಿರುವುದರಿಂದ ಆಡಳಿತಾತ್ಮಕವಾಗಿ ಅರ್ಜಿದಾರರು ಬೆಂಗಳೂರಿಗೆ ಅಲೆದಾಡುವುದು ನಿಜವೇ; | ಕಲಬುರಗಿ ಪೀಠವು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. |
| (ಇ) | ಕಲಬುರಗಿಯಲ್ಲಿ ಹೆಸರಿಗೆ ಮಾತ್ರ ಪೀಠವಿದ್ದು ಎಲ್ಲಾ ಕಾರ್ಯಗಳು ಬೆಂಗಳೂರಿನಿಂದ ನಡೆಯುತ್ತಿದ್ದು ಈ ಭಾಗದ ಜನರ ಸಮಸ್ಯೆಗಳಿಗೆ ಮತ್ತು ಅರ್ಜಿದಾರರಿಗೆ ತೊಂದರೆಯಾಗುತ್ತಿದ್ದು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ; | ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ. |
| (ಈ) | ಕಲಬುರಗಿಯಲ್ಲಿ ಸ್ಥಾಪಿತವಾದ ಮಾಹಿತಿ ಹಕ್ಕು ಪೀಠದ ಕಾರ್ಯಕ್ರಮಗಳನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಿ ಜನರ/ ಅರ್ಜಿದಾರರ ಸಮಸ್ಯೆಗಳಿಗೆ ಪರಿಹಾರ ದೊರಕಿಸಿ ಕೊಡಲಾಗುವುದೇ? | ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ. |

ಸಂಖ್ಯೆ: **ಸಿಆಸುಇ(ಆಸು) 359 ಆರ್ ಟಿ ಐ 2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

# ಅನುಬಂಧ

| ಕ್ರ. ಸಂ. | ಸಿಬ್ಬಂದಿಯವರ ಹೆಸರು | ಹುದ್ದೆ | ಷರಾ |
|---|---|---|---|
| 1. | ಶ್ರೀ ಶಿವಕುಮಾರ | ಶಾಖಾಧಿಕಾರಿ | ಕರ್ನಾಟಕ ಸಚಿವಾಲಯದಿಂದ ನಿಯೋಜನೆ |
| 2. | ಶ್ರೀ ಶಿವಶರಣಪ್ಪ | ಪ್ರ.ದ.ಸ. | ಕರ್ನಾಟಕ ಸಚಿವಾಲಯದಿಂದ ನಿಯೋಜನೆ |
| 3. | ಶ್ರೀ ಯಲ್ಲಾಲಿಂಗ | ವಾಹನ ಚಾಲಕ | ಕಲ್ಯಾಣ ಕರ್ನಾಟಕ ಸಾರಿಗೆ ಇಲಾಖೆಯಿಂದ ನಿಯೋಜನೆ |
| 4. | ಶ್ರೀ ನರಸಿಂಹ ಆರ್. | ಗನ್ ಮ್ಯಾನ | ಪೊಲೀಸ ಇಲಾಖೆಯಿಂದ ಒ.ಡಿ.ಮೇಲೆ |
| 5. | ಶ್ರೀ ಶಿವಾನಂದ ಗುರಪ್ಪಾ ಬಿರಾದಾರ | ಶೀಘ್ರಲಿಪಿಗಾರರು | ಹೊರಗುತ್ತಿಗೆ ಆಧಾರದ ಮೇಲೆ |
| 6. | ಶ್ರೀ ಬಸವರಾಜ ನೀ. ಲೋಹಾರ್ | ಸಹಾಯಕರು | ಹೊರಗುತ್ತಿಗೆ ಆಧಾರದ ಮೇಲೆ |
| 7. | ಶ್ರೀಮತಿ ಈರಮ್ಮ | ಶೀಘ್ರಬರಹಗಾರರು | ಹೊರಗುತ್ತಿಗೆ ಆಧಾರದ ಮೇಲೆ |
| 8. | ಶ್ರೀ ಸಂತೋಷಕುಮಾರ | ಬೆರಳಚ್ಚುಗಾರರು | ಹೊರಗುತ್ತಿಗೆ ಆಧಾರದ ಮೇಲೆ |
| 9. | ಶ್ರೀ ತನಯ ಅಂಗೇಶ ಗೌಳಿ | ದಲಾಯತ | ಹೊರಗುತ್ತಿಗೆ ಆಧಾರದ ಮೇಲೆ |